## ಕರ್ನಾಟಕ ಅರಣ್ಯ ಇಲಾಖೆ

ಕ್ರ.ಸಂ.: ಬಿ2/ಜಿಎಫ್ಎಲ್/4.388/ಸಿಆರ್- 58/2013-14 1807

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಚೇರಿ
ಬಾಗಲಕೋಟೆ ವಿಭಾಗ, ಬಾಗಲಕೋಟೆ,
ದಿನಾಂಕ: 15 /12/2023

**ನೆನಪೋಲೆ-2**

INWARD No: 2919
Date : 29/12/23
Case Worker ...
A.S. E.E.

ಗೆ,

ಕಾರ್ಯಪಾಲಕ ಇಂಜಿನಿಯರ್,
ಕೆಶಿಪ್ ವಿಭಾಗ, ಕರಿಬಸವೇಶ್ವರ ನಿಲಯ,
# 892/1, ಪ್ಲಾಟ್ ನಂ.1
ಶ್ರೀರಾಮನಗರ 2ನೇ ಕ್ರಾಸ್,
ರಾಣೆಬೆನ್ನೂರು-581115.

ಮಾನ್ಯರೆ,

ವಿಷಯ: Diversion of 4.388 Ha. of Forest land in Sy.No. 32 of Siddanakolla, Sy.No. 33 of Benakanavari, Sy.No. 16 of Huvinahalli and Sy.No. 116 & 122 of Ramathala Hungund taluk, Bagalkote district for improvement of road from Pattadakallu to Kamatagi (Via Aihole) link 21F at Siddanakolla in favour of the Executive Engineer, KSHIP division Belagavi – reg. **(Proposal No. FP/KA/ROAD/22392/2016)**

ಉಲ್ಲೇಖ:
1) ಕೇಂದ್ರ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ (ಪ್ರಾದೇಶಿಕ ಕಚೇರಿ), ಬೆಂಗಳೂರುರವರ ಪತ್ರ ಸಂಖ್ಯೆ: F.No. 4-KRB 1125/2017-BAN/421 ದಿನಾಂಕ: 14-02-2018.
2) ಈ ಕಚೇರಿ ಪತ್ರ ಸಮ ಸಂಖ್ಯೆ ದಿನಾಂಕ: 02-03-2018 ಮತ್ತು ಪರಿಷ್ಕೃತ ಡಿಮ್ಯಾಂಡ್ ನೋಟಿಸು ದಿನಾಂಕ: 4-05-2018, 20-06-2018,
3) ತಮ್ಮ ಪತ್ರ ಸಂಖ್ಯೆ: EE/KSHIP/BGV/2018-19/867 ದಿನಾಂಕ: 25-07-2018.
4) ಈ ಕಚೇರಿ ಪತ್ರ ಸಮ ಸಂಖ್ಯೆ ದಿನಾಂಕ: 10-08-2018.
5) ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿಗಳು (ಎಫ್‌ಸಿಎ), ಬೆಂಗಳೂರುರವರ ಪತ್ರ ಸಂಖ್ಯೆ: A5(2).(A5(3)/GFL/CR-167/2011-12 ದಿನಾಂಕ: 24-11-2018
6) ತಮ್ಮ ಪತ್ರ ಸಂಖ್ಯೆ: AEE/KSHIP/SD/Gokak/2019-20/39 ದಿನಾಂಕ: 6-07-2020 & 22-09-2020.
7) ಈ ಕಚೇರಿ ಪತ್ರ ಸಮ ಸಂಖ್ಯೆ: 28/10/2020
8) ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರುರವರ ಪತ್ರ ಸಂಖ್ಯೆ: A5(3)/GFL/CR-28/2009-10 ( E-Office File No. KFD/HOFF/A5-3(GFL)/34/2019-FC ದಿನಾಂಕ: 30-04-2020.
9) ಈ ಕಚೇರಿ ಪತ್ರ ಸಮ ಸಂಖ್ಯೆ ದಿನಾಂಕ: 04-01-2021
10) ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರುರವರ ಪತ್ರ ಸಂಖ್ಯೆ: A5(3)/GFL/CR-28/2009-10 ( E-Office File No. KFD/HOFF/A5-3(GFL)/34/2019-FC ದಿನಾಂಕ: 19-04-2021.
11) ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿಗಳು (ಎಫ್‌ಸಿಎ), ಬೆಂಗಳೂರುರವರ ಪತ್ರ ಸಂಖ್ಯೆ: A5(2).A5(3)/GFL/CR-227/1995-96 ದಿನಾಂಕ: 31-05-2021.
12) ಈ ಕಚೇರಿ ಹೆಚ್ಚುವರಿ ಡಿಮ್ಯಾಂಡ್ ನೋಟಿಸು ದಿನಾಂಕ: 11-06-2021
13) ಈ ಕಚೇರಿ ಡಿಮ್ಯಾಂಡ್ ನೋಟಿಸು ನೆನಪೋಲೆ ದಿನಾಂಕ ಮತ್ತು 2-09-2021.
14) ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿಗಳು (ಎಫ್‌ಸಿಎ), ಬೆಂಗಳೂರುರವರ ಪತ್ರ ಸಂಖ್ಯೆ: A5(3)/GFL/CR-28/2009-10 ದಿನಾಂಕ: 22-08-2023.

27/12/23

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಪಟ್ಟದಕಲ್ಲು-ಕಮತಗಿ ರಾಜ್ಯ ಹೆದ್ದಾರಿ ಅಭಿವೃದ್ಧಿಗಾಗಿ 4.388 ಹೆಕ್ಟೇರ್ ಅರಣ್ಯ ಪ್ರದೇಶದ ಬಿಡುಗಡೆಗೆ ಉಲ್ಲೇಖ (1)ರ ಪತ್ರದಡಿ ಕೇಂದ್ರ ಸರ್ಕಾರದ ಪ್ರಾಥಮಿಕ ಅನುಮೋದನೆ ದೊರಕಿರುತ್ತದೆ. ಈ ಸಂಬಂಧ ಕೇಂದ್ರ ಸರ್ಕಾರದ ಪ್ರಾಥಮಿಕ ಅನುಮೋದನೆಯಲ್ಲಿ ವಿಧಿಸಲಾಗಿರುವ ಶರತ್ತುಗಳನ್ನು ಪಾಲನೆ ಮಾಡುವುದು ಅವಶ್ಯಕವಾಗಿರುತ್ತದೆ. ಕೇಂದ್ರ ಸರ್ಕಾರವು ಪ್ರಾಥಮಿಕ ಅನುಮೋದನೆಯಲ್ಲಿ ವಿಧಿಸಿರುವ ಶರತ್ತಿನಂತೆ ಪರಿಹಾರಾತ್ಮಕ ನೆಡುತೋಪು ದರವನ್ನು ಪಾವತಿಸಲು ಉಲ್ಲೇಖ (2)ರ ಈ ಕಚೇರಿ ಪತ್ರದಡಿ ಡಿಮ್ಯಾಂಡ್ ನೋಟಿಸು ನೀಡಲಾಗಿತ್ತು.

ಅದರಂತೆ, ತಾವು ಪ್ರತಿ ಹೆಕ್ಟೇರ್‌ಗೆ 3,72,000/- ದರದಂತೆ ರೂ. 13,16,400/- ಗಳನ್ನು ಪರಿಹಾರಾತ್ಮಕ ನೆಡುತೋಪು ದರಗಳನ್ನು ಪಾವತಿಸಿ ಉಲ್ಲೇಖ (3) ರ ಪತ್ರಗಳಡಿ ಸಲ್ಲಿಸಿರುವ ವರದಿಯನ್ನು ಉಲ್ಲೇಖ (4) ಮತ್ತು (7) ರ ಪತ್ರಗಳಡಿ ಮೇಲಾಧಿಕಾರಿಗಳಿಗೆ ಸಲ್ಲಿಸಲಾಗಿರುತ್ತದೆ. ಈ ಮಧ್ಯೆ ಉಲ್ಲೇಖ (8) ಪತ್ರದಡಿ ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರುರವರು ಪರಿಹಾರಾತ್ಮಕ ನೆಡುತೋಪು ಬೆಳೆಸುವ ದರಗಳನ್ನು ದಿನಾಂಕ:30-06-2019 ರವರೆಗೆ ಭಾಗಶಃ ಭರಿಸಿದ ಪ್ರಕರಣಗಳಲ್ಲಿ ರೂ. 4,41,200/-ಗಳನ್ನು ಪ್ರತಿ ಹೆಕ್ಟೇರ್‌ಗೆ ಪಾವತಿಸಿಕೊಳ್ಳಲು ನಿರ್ದೇಶನವಿದ್ದ ಪ್ರಯುಕ್ತ, ಸದರಿ ದರಗಳನ್ವಯ ವ್ಯತ್ಯಾಸದ ಮೊತ್ತ ರೂ. 6,19,586/-ಪಾವತಿಸಲು ಉಲ್ಲೇಖ (9) ರಡಿ ಬೇಡಿಕೆ ಪತ್ರವನ್ನು ನೀಡಲಾಗಿತ್ತು. ಆದರೆ ಸದರಿ ಮೊತ್ತವನ್ನು ಕೂಡ ನೀವು ಪಾವತಿ ಮಾಡಿರುವುದಿಲ್ಲ.

ಈ ಮಧ್ಯೆ ಉಲ್ಲೇಖ (10) ರ ಪತ್ರದಡಿ ಪರಿಹಾರಾತ್ಮಕ ದರಗಳನ್ನು ಪುನಃ ಪರಿಷ್ಕರಿಸಿ ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ರವರು ಆದೇಶ ಹೊರಡಿಸಿದ್ದು, ಸದರಿ ಆದೇಶದಲ್ಲಿ ದಿನಾಂಕ: 30-06-2019 ರವರೆಗೆ ಭಾಗಶಃ ಪರಿಹಾರಾತ್ಮಕ ವೆಚ್ಚವನ್ನು ಭರಿಸಿದ ಪ್ರಕರಣಗಳಲ್ಲಿ ಪ್ರತಿ ಹೆಕ್ಟೇರ್‌ಗೆ ರೂ.4,62,000/- ರಂತೆ ಲೆಕ್ಕಾಚಾರ ಮಾಡಿ ವ್ಯತ್ಯಾಸದ ಮೊತ್ತ ರೂ. 7,10,856/- ಗಳನ್ನು ಪಾವತಿಸಲು ಉಲ್ಲೇಖ (12) & (13)ರ ಈ ಕಚೇರಿ ಪತ್ರದಡಿ ತಿಳಿಸಲಾಗಿತ್ತು ಆದರೆ ನೀವು ಇದುವರೆಗೂ ಸದರಿ ಮೊತ್ತವನ್ನು ಪಾವತಿಸಿದ್ದು ಇರುವುದಿಲ್ಲ.

ಉಲ್ಲೇಖ (14)ರ ಪತ್ರದಡಿ ಸದರಿ ಪರಿಹಾರಾತ್ಮಕ ನೆಡುತೋಪು ಬೆಳೆಸುವ ವೆಚ್ಚದ ದರಗಳನ್ನು ದಿನಾಂಕ: 30-06-2019ರವರೆಗೆ ಭಾಗಶಃ ಭರಿಸಿರುವ ಪ್ರಕರಣಗಳಿಗೆ ರೂ. 4,62,000/- ರಿಂದ 4,80,000/- ಕ್ಕೆ ಪರಿಷ್ಕರಿಸಗೊಳಿಸಲಾಗಿರುತ್ತದೆ. ಆದ್ದರಿಂದ ಕೂಡಲೇ ಈ ಕೆಳಗಿನಂತೆ ಬಾಕಿ ಮೊತ್ತವನ್ನು ಪಾವತಿಸಿ ವರದಿ ಸಲ್ಲಿಸಲು ಕೋರಲಾಗಿದೆ.

| Stage-I approval Condition number & particulalrs in brief | Quantity/Extent (Ha) | Rate (Rs/Unit) | Amount required to be paid (Rs) | Amount paid already (Rs) | Balance amount required to be paid now (Rs.) |
|---|---|---|---|---|---|
| (1) | (2) | (3) | (4) | (5) | (6) |
| Condition Number(4) Cost of Compensatory Afforestation over identified non-forest land shall be deposited by the User Agency. | 4.388 | 4,80,000/- | 21,06,240/- | 13,16,400/- | 7,89,840/- |
| | | | | **Total:** | **7,89,840/-** |

ಮುಂದುವರೆದು ನಿಮಗೆ ತಿಳಿಸುವುದೇನೆಂದರೆ, ನೀವು ವ್ಯತ್ಯಾಸದ ಮೊತ್ತವನ್ನು ಪಾವತಿಸದೇ ಇರುವುದರಿಂದ ಪ್ರಸ್ತಾವನೆಗೆ ಕೇಂದ್ರ ಸರ್ಕಾರದಿಂದ ಅಂತಿಮ ಅನುಮೋದನೆ ಪಡೆಯುವಲ್ಲಿ

ವಿಳಂಬವಾಗುತ್ತಿದ್ದು, ಸದರಿ ಪ್ರಸ್ತಾವನೆಗೆ ಕೇಂದ್ರ ಸರ್ಕಾರದಿಂದ ಪ್ರಾಥಮಿಕ ಅನುಮೋದನೆ ದೊರೆತು ಈಗಾಗಲೇ 5 ವರ್ಷಗಳು ಗತಿಸಿದ್ದು, ಸದರಿ ಪ್ರಸ್ತಾವನೆಗೆ ನೀಡಿರುವ ಪ್ರಾಥಮಿಕ ಅನುಮೋದನೆಯನ್ನು ಹಿಂತೆಗೆದುಕೊಳ್ಳುವ ಸಾಧ್ಯತೆ ಇರುತ್ತದೆ. ಮತ್ತು ಪರಿಹಾರಾತ್ಮಕ ನೆಡುತೋಪು ಬೆಳೆಸುವ ವೆಚ್ಚದ ದರಗಳು ಕೂಡ ವರ್ಷದಿಂದ ವರ್ಷಕ್ಕೆ ಪರಿಷ್ಕೃತಗೊಳ್ಳುತ್ತಿದ್ದು, ವಿಳಂಭ ಮಾಡಿದಲ್ಲಿ ಹೆಚ್ಚಿನ ಮೊತ್ತವನ್ನು ನೀವು ಇಲಾಖೆಗೆ ಪಾವತಿಸಬೇಕಾಗುತ್ತದೆ. ಆದಕಾರಣ ತಪ್ಪದೇ ಮೇಲೆ ತಿಳಿಸಿದ ವ್ಯತ್ಯಾಸದ ಮೊತ್ತವನ್ನು ಇಲಾಖೆಯ ವೆಬ್‌ಪೋರ್ಟಲ್ (https://parivesh.nic.in/) ಮುಖಾಂತರ ಪಾವತಿಸಿ ಅನುಪಾಲನಾ ವರದಿಯನ್ನು ಸಲ್ಲಿಸಲು ಮತ್ತೊಮ್ಮೆ ಕೋರಲಾಗಿದೆ.

ತಮ್ಮ ವಿಶ್ವಾಸಿ

ಉಪ ಅರಣ್ಯ ಸಂರಕ್ಷಣಾಧಿಕಾರಿ
ಬಾಗಲಕೋಟ ವಿಭಾಗ, ಬಾಗಲಕೋಟ.